## ಬಾಲ ಕಲಾವಿದರೂ ಬಾಲ ಕಾರ್ಮಿಕರೆ

ವಾರದ ಪತ್ರ

ಬಾಲ ಕಾರ್ಮಿಕ ಪದ್ಧತಿ ಅಳಿಯಲಿ, ಮಾನವತೆ ಬೆಳಗಲಿ ದುಡಿಮೆ ಬೇಡ, ಶಿಕ್ಷಣ ಬೇಕು, ಎಳೆಯರ ಹೃದಯದಲ್ಲಿ ಅರಳಲಿ ಹರ್ಷ, ಉಜ್ವಲ ಭವಿಷ್ಯಕ್ಕೆ ವಿದ್ಯೆಯೇ ಉತ್ಕರ್ಷ. ಇವೆಲ್ಲವೂ ಬಾಲ ಕಾರ್ಮಿಕ ನಿರ್ಮೂಲನೆ ಬಗೆಗಿನ ಘೋಷಣೆಗಳು. ನಮ್ಮ ದೇಶದಲ್ಲಿ ಹತ್ತಾರು ಕಾನೂನುಗಳಿದ್ದರೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯವಾಗಿಲ್ಲ. ಈ ಪದ್ಧತಿಗೆ ನಿಷೇಧ ಇರುವ ವೃತ್ತಿಯಲ್ಲಿ ಮನರಂಜನಾ ಸ್ಥಳವೂ ಬರುತ್ತದೆ.

ಎಷ್ಟೋ ಪೋಷಕರು ತಾವು ಪೂರೈಸಿಕೊಳ್ಳಲಾಗದಿದ್ದ ಆಸೆಗಳನ್ನು ತಮ್ಮ ಮಗುವಿನ ಎಳೆಭುಜದ ಮೇಲೆ ಹೇರಿ ಅದರ ಬಾಲ್ಯ ಸಹಜ ಆಟೋಟಗಳಿಗೂ ಅವಕಾಶ ನೀಡದಂತೆ ಜೀತದಲ್ಲಿರುವ ಬಾಲಕಾರ್ಮಿಕರಂತೆ 24/7 ಸಂಗೀತ, ನಾಟಕ, ನೃತ್ಯ, ಎಂದು ಬೀದಿ ಬೀದಿ ಸುತ್ತಿಸಿ ಮುಗ್ಧ ಮಕ್ಕಳಿಗೆ ಕಿರುತೆರೆಯಲ್ಲಿ ಕಾಣುವ ಆಮಿಷ ತೋರಿಸಿ ಅವರನ್ನು ಧಾರಾವಾಹಿಯಲ್ಲಿ ರಿಯಾಲಿಟಿ ಶೋಗಳಲ್ಲಿ ಮಿನುಗುವಂತೆ ಮಾಡುತ್ತಾರೆ. ಈ ಮಕ್ಕಳನ್ನು ಬಾಲಕಾರ್ಮಿಕರೆಂದೇ ಹೇಳಬಹುದು.

ಮಕ್ಕಳು ತಮ್ಮ ಅಮೂಲ್ಯವಾದ ಬಾಲ್ಯ ಜೀವನವನ್ನು ಆಟವಾಡಿ, ಓದಲು ಸಮಯ ಸಿಗದೆ ಕಳೆಯುತ್ತಾರೆ. ಎಳೆ ಚರ್ಮಗಳಿಗೆ ಮೇಕಪ್ಪಿನ ಲೇಪ ಬಳಿದು ಎಳೆ ತುಟಿಗಳಿಗೆ ಲಿಪ್‌ಸ್ಟಿಕ್ ಸವರಿ ಬಾರದ ಅಳು–ನಗು ಬರಿಸಿಕೊಂಡು ಅರ್ಥವಾಗದ ಮತ್ತು ವಯಸ್ಸಿಗೆ ಮೀರಿದ ಸಂಭಾಷಣೆ ಹೇಳುತ್ತಾ ತಂದೆ ತಾಯಿಯ ಒತ್ತಾಸೆಗೆ ದುಡಿಯುವ ಮುಗ್ಧ ಮಕ್ಕಳನ್ನು ನೋಡಿದಾಗ ಅಯ್ಯೋ ಇವರ ಬಾಲ್ಯ ಕಳೆದು ಹೋಗುತ್ತಿದೆಯಲ್ಲಾ ಎನಿಸುತ್ತದೆ.

ಸರ್ಕಸ್ಸನ್ನು ಬ್ಯಾನ್ ಮಾಡಿದಂತೆ ದೃಶ್ಯ ಮಾಧ್ಯಮದಲ್ಲಿ ಬಾಲಕಲಾವಿದರನ್ನು ಬ್ಯಾನ್ ಮಾಡಬಹುದು ಎನಿಸಿದರೆ ದೃಶ್ಯ ಮಾಧ್ಯಮವನ್ನೇ ನಿಷೇಧಿಸಬೇಕಾಗುತ್ತದೆ, ಅದಾಗದ ಕೆಲಸವಾದುದ್ದರಿಂದ ಪೋಷಕರು ತಮ್ಮ ಮಕ್ಕಳಿಂದ ತಾವು ಜನಪ್ರಿಯವಾಗುವುದನ್ನು ಬಿಟ್ಟು ಆ ಮಕ್ಕಳಿಗೆ ಆಟಪಾಠಗಳಲ್ಲಿ ನಕ್ಕು ನಲಿಯುವ ಸುಂದರ ಬಾಲ್ಯವನ್ನು ಕೊಡಬೇಕಿದೆ.

–ವೀಣಾ ಶಂಕರ್, ಬೆಂಗಳೂರು

## ಕುತೂಹಲಕರ ತಿರುವು

ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುವ ಟಿ.ಎನ್. ಸೀತಾರಾಂ ನಿರ್ದೇಶನದ ಜನಪ್ರಿಯ ಧಾರಾವಾಹಿ 'ಮಗಳು ಜಾನಕಿ' ಕುತೂಹಲಕರ ತಿರುವು ಪಡೆದುಕೊಂಡಿದೆ. ವರುಣ್ ವೈಭವ್ ಎಂದು ಹೇಳಿಕೊಂಡು ಸಂಜನಾಗೆ ಮೋಸ ಮಾಡಿದ್ದಾನೆ ಎನ್ನಲಾದ ಗೌತಮ್‌ನ ಮೋಸದ ಸಂಚನ್ನು ಬಯಲು ಮಾಡಲು ಐಒ (ತನಿಖಾ ಅಧಿಕಾರಿ) ಆಗಿ ಜಾನಕಿಯನ್ನು ನೇಮಿಸಿದ್ದನ್ನು ಹೋಮ್‌ಮಿನಿಸ್ಟರ್ ಚಂದು ಭಾರ್ಗಿ ವಿರೋಧಿಸಿದ್ದಲ್ಲದೆ, ಈ ತನಿಖಾಧಿಕಾರಿಯನ್ನು ಬದಲಾಯಿಸಿ ಬೇರೆಯವರಿಗೆ ಕೊಡಲು ಡಿಐಜಿಗೆ ಸೂಚಿಸುತ್ತಾರೆ. ಆದರೆ ಅದನ್ನು ಒಪ್ಪದ ಮುಖ್ಯಮಂತ್ರಿಗಳು ಜಾನಕಿ ಅವರನ್ನೇ ಐಒ ಆಗಿ ಮುಂದುವರಿಸುತ್ತಾರೆ. ಜಾನಕಿ ಸಂಜನಾಳನ್ನು ತನಿಖೆ ಮಾಡಲು ಇನ್‌ಸ್ಪೆಕ್ಟರ್ ಶ್ರೀಕಾಂತ್ ಜಾಜೂರ್ ಜತೆಗೆ ಸಂಜನಾ ಮನೆಗೆ ಬರುತ್ತಾಳೆ.

ಅಲ್ಲಿ ಸಂಜನಾಳನ್ನು ಪ್ರಶ್ನಿಸುವಾಗ ಗೌತಮ್‌ನನ್ನು ಹರಿದ್ವಾರದಲ್ಲಿ ಏಳು ವರ್ಷ ಹಿಂದೆ ದೇವಸ್ಥಾನವೊಂದರಲ್ಲಿ ಮದುವೆಯಾಗಿದ್ದು, ಮಗಳು ಇಂಚರಾ ಹುಟ್ಟಿದ ಬಳಿಕ ತನಗೆ ಗೌತಮ್ ಮೋಸ ಮಾಡಿ ನೈಜೀರಿಯಾದ ಬೋಟ್ಸ್‌ವಾನಕ್ಕೆ ಹೋಗಿದ್ದನ್ನು ಪ್ರಸ್ತಾಪಿಸುತ್ತಾಳೆ. ಆಗ ತನಿಖೆಯ ಮುಂದಿನ ಭಾಗವಾಗಿ ಮದುವೆಗೆ ಯಾರೆಲ್ಲ ಬಂದಿದ್ದರು ಎಂದು ಜಾನಕಿ ಕೇಳಿದಾಗ ಕೆಲವೊಂದು ಹೆಸರುಗಳನ್ನು ಹೇಳಿದ ಸಂಜನಾ 'ಶಿವಾನಿ ಪಾಠಕ್' ಎಂಬವರೂ ಬಂದಿದ್ದರು ಎನ್ನುತ್ತಾಳೆ. ಜಾನಕಿಗೆ ಇದರಿಂದ ಅನುಮಾನ ಬರುತ್ತದೆ. ಯಾರೀ ಶಿವಾನಿ ಪಾಠಕ್ ಎಂಬುದು ವೀಕ್ಷಕರಲ್ಲೂ ಕುತೂಹಲ ಮೂಡಿಸಿದ್ದು, 'ಮಗಳು ಜಾನಕಿ' ಹಲವು ಕೌತುಕಗಳನ್ನು ಸೃಷ್ಟಿಸಿ ಕಾಯುವಂತೆ ಮಾಡಿದೆ.

–ವಿನಾಯಕ ಹೆಗಡೆ, ಬೆಂಗಳೂರು

## ಮುತ್ತು ಮದುವೆ ಆಗಲಿ

ಝೀ ಟೀವಿಯಲ್ಲಿ ಪ್ರಸಾರವಾಗುತ್ತಿರುವ 'ಯಾರೇ ನೀ ಮೋಹಿನಿ' ಅದರ ಹೆಸರಿಗೆ ತಕ್ಕಂತೆ ನಿರೂಪಣೆ ಆಗಿಲ್ಲ. ಸುಮ್ಮನೆ ಕತೆಯನ್ನು ಎಳೆದುಕೊಂಡು ಹೋಗುವಂತಿದೆ. ಮೋಹಿನಿ ಅಪರೂಪಕ್ಕೆ ಒಮ್ಮೆ ಕಾಣಿಸಿಕೊಳ್ಳುತ್ತಾಳೆ. ಕಥೆ ಈಗಾಗಲೇ ವೀಕ್ಷಕರ ಮನೋಭಿತ್ತಿಯಲ್ಲಿ ಮೂಡಿದೆ. ಅದರ ಬಗ್ಗೆ ಮುಂದೇನು ಘಟಿಸಬಹುದು ಎಂದು ತಿಳಿದುಕೊಳ್ಳುವ ಕುತೂಹಲವೇ ಉಳಿದಿಲ್ಲ. ಆದಷ್ಟು ಬೇಗ ಮುತ್ತುವಿನ ಮದುವೆ ಮಾಡಿಸಿ ಮತ್ತೊಂದು ಧಾರಾವಾಹಿಗೆ ಅವಕಾಶ ಮಾಡಬೇಕು ಎನ್ನುವುದು ಮನವಿ.

–ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ಈ ಹಿಂಸೆ ಸರಿಯಲ್ಲ

ಝೀ ಕನ್ನಡ ವಾಹಿನಿಯಲ್ಲಿ ಇತ್ತೀಚೆಗೆ ಪ್ರಾರಂಭವಾದ ರಾಧಾಕಲ್ಯಾಣ ಧಾರಾವಾಹಿಯಲ್ಲಿ ಒಬ್ಬ ಅಮಾಯಕ ಬಡ ಹೆಣ್ಣು ಆಸ್ತಮಾದಿಂದ ಬಳಲುತ್ತಿರುತ್ತಾಳೆ. ಆಕೆ ಇದ್ದ ಮನೆಯ ಯಜಮಾನಿಗೆ ಹಣದ ಸೊಕ್ಕು. ಅವಳು ಆ ಅಮಾಯಕ ಹೆಣ್ಣನ್ನು ಮೆಣಸಿನಕಾಯಿ ಹೊಗೆ ಹಾಕಿ ಅಡುಗೆ ಮನೆಯಲ್ಲಿ ಕೂಡಿಹಾಕುತ್ತಾಳೆ. ಜೊತೆಗೆ ಆಕೆಯ ಬಳಿ ಇದ್ದ ರೋಗದ ತಾತ್ಕಾಲಿಕ ಉಪಶಮನ ಕೊಡುವ ಇನ್ ಹೇಲ್‌ರನ್ನು ಎತ್ತಿಕೊಂಡು ಎಲ್ಲಿಗೋ ಹೊರಟು ಹೋಗುತ್ತಾಳೆ. ವಿಶ್ವ ಇಂದು ಇಷ್ಟೆಲ್ಲಾ ಮುಂದುವರೆದಿರುವಾಗ ಈ ದೃಶ್ಯವನ್ನು ನೋಡಿದರೆ ಹಲವಾರು ದಶಕಗಳ ಹಿಂದಿನ ತಮಿಳು ಸಿನಿಮಾ ಜ್ಞಾಪಕಕ್ಕೆ ಬಂತು. ಇಂತಹ ಕಥೆ ಬರೆಯುತ್ತಿರುವ ಲೇಖಕರು, ಚಿತ್ರೀಕರಿಸುತ್ತಿರುವ ನಿರ್ದೇಶಕರು ಸ್ವಲ್ಪ ಕಣ್ತೆರೆದು ಇಂದಿನ ಯುಗಕ್ಕೆ ತಕ್ಕಂತೆ ಬರಬೇಕು. ಮುನ್ನಡೆಯಬೇಕೆ ಹೊರತು ಹಿನ್ನಡೆಯಬಾರದು. ಇಂದು ಜಗತ್ತಿನಲ್ಲಿ ಹೆಣ್ಣು ಎಂತೆಂತಹ ಸಾಧನೆಗಳನ್ನು ಮಾಡುತ್ತಿದ್ದಾರೆ. ಅವನ್ನು ಗಮನಿಸಿ ಜನರ ಮುಂದಿಡಿ.

–ಶ್ರೀನಾಥ್ ಕೊನೇಟಿ, ಬೆಂಗಳೂರು

## ಧಾರಾವಾಹಿ ಮತ್ತು ಮಹಿಳಾ ವಿಲನ್‌ಗಳೂ

ಕುಲವಧು, ಅಗ್ನಿಸಾಕ್ಷಿ ಮತ್ತು ರಾಧಾ ರಮಣ ಧಾರಾವಾಹಿಗಳಲ್ಲಿ ಖಳನಾಯಕಿಯರ ಹೊಸ ಹೊಸ ತಂತ್ರಗಳನ್ನು ವೀಕ್ಷಿಸಿ ಬೇಸತ್ತಿದ್ದ ಪ್ರೇಕ್ಷಕರಿಗೆ ನಿರ್ದೇಶಕರು ಹೊಸ ರೀತಿಯ ಖಳನಾಯಕಿಯರನ್ನು ಪರಿಚಯಿಸುತ್ತಿದ್ದಾರೆ. ರಂಗನಾಯಕಿ ಧಾರಾವಾಹಿಯಲ್ಲಿ ತಂದೆಗೆ ವಿಷ ಉಣಿಸಿ ಕೊಲ್ಲಲು ಪ್ರಯತ್ನಿಸುತ್ತಿರುವ ಹೆಣ್ಣು ಮಕ್ಕಳು, ಮಂಗಳ ಗೌರಿ ಮದುವೆ ಧಾರಾವಾಹಿಯ ಸಜ್ಜನರಂತೆ ನಟಿಸಿ ಅಮಾಯಕ ಹೆಣ್ಣು ಮಕ್ಕಳನ್ನು ಮನೆಗೆ ಕರೆದೊಯ್ದು ಕ್ರಮೇಣ ಅವರ ಕಿಡ್ನಿ ಕಣ್ಣು ಇತ್ಯಾದಿಗಳನ್ನು ಮಾರುವವರು. ಒಂದು ಸಂಸಾರದ ಬಗ್ಗೆ ದ್ವೇಷವಿದ್ದು ಅದನ್ನು ನಾಶಪಡಿಸಬೇಕಾದರೆ ಆ ಮನೆಗೆ ಸೊಸೆಯಾಗಿಯೇ ಬರಬೇಕೆಂದು ಎಲ್ಲಿ ಹೇಳಿದೆ?

– ಶಾಂತಾ ನಾಗರಾಜ್, ಬೆಂಗಳೂರು

## ರಂಗು ಮೂಡಿಸಿದ ರಂಗವಲ್ಲಿ

ಚಂದನದ 'ರಂಗವಲ್ಲಿ' ದಿನದಿಂದ ದಿನಕ್ಕೆ ಜನಪ್ರಿಯತೆಯನ್ನು ಪಡೆಯುತ್ತಿದೆ. ಪ್ರತಿ ರವಿವಾರ ಬೆಳಿಗ್ಗೆ 9 ಗಂಟೆಗೆ ಪ್ರಸಾರವಾಗುವ ಈ ಕಾರ್ಯಕ್ರಮ ಜನಪ್ರಿಯ ಚಿತ್ರಗೀತೆಗಳ ರಂಗುರಂಗಿನ ಭಾವಗಳ ರಸದೌತಣವನ್ನು ಪ್ರೇಕ್ಷಕರಿಗೆ ನೀಡುತ್ತದೆ. ಚಿತ್ರಗೀತೆಯ ಹುಟ್ಟು ಬೆಳವಣಿಗೆ ಮತ್ತು ಅದು ಚಿತ್ರೀಕರಣಗೊಂಡ ಪರಿಯನ್ನು ಹಲವು ವಿಶಿಷ್ಟ ಮಾಹಿತಿಯನ್ನು ನೀಡುವ ಕಾರ್ಯಕ್ರಮವಾಗಿದೆ. ಜೊತೆಗೆ ಹಾಡನ್ನು ಬರೆಯುವ ಸಂದರ್ಭದಲ್ಲಿ ನಡೆದ ಘಟನಾವಳಿಯ ವಿವರವನ್ನು ನೀಡುತ್ತದೆ. ಕವಿಯ ಭಾವಕ್ಕೆ ದರ್ಪಣ ಹಿಡಿಯುವ ಕಾರ್ಯಕ್ರಮವಾಗಿದೆ. ಸಂಗೀತ ನಿರ್ದೇಶಕರ ವಿವರವನ್ನು ಅವರು ಆ ಗೀತೆಗೆ ಸ್ಪಂದಿಸುವ ರೀತಿ ಹೀಗೆ ಅನೇಕ ಮಹತ್ವದ ಮಾಹಿತಿಯನ್ನು ಒದಗಿಸುವಲ್ಲಿ ಇದು ಯಶಸ್ವಿಯಾಗಿದೆ.

–ಕೆ.ಪಿ. ರಾಮಗುಂಡಿ, ಬೈಲಹೊಂಗಲ